<u>ವರದಿ ಮಾಡಬಹುದಾಗಿದೆ</u>

ಭಾರತದ ಸರ್ವೋಚ್ಚ ನ್ಯಾಯಾಲಯ

ಸಿವಿಲ್ ಅಪೀಲು ಅಧಿಕಾರವ್ಯಾಪ್ತಿ

2023ರ ಸಿವಿಲ್ ಅಪೀಲು ಸಂಖ್ಯೆ: 2471

(@ಎಸ್ಎಲ್ಪಿ (ಸಿ) ಸಂಖ್ಯೆ: 6185/2020)

ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ) ಕೆಪಿಟಿಸಿಎಲ್ & ಇತರರು

ವಿರುದ್ಧ

ಸಿ. ಪಿ. ಮುಂದಿನಮನಿ & ಇತರರು

<u>ತೀರ್ಪು</u>

1. ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರಿಟ್ ಅರ್ಜಿ ಸಂಖ್ಯೆ. 4193/2017 ರಲ್ಲಿ ನೀಡಿದ ಪ್ರಶ್ನಿತ ತೀರ್ಪು ಮತ್ತು ಆದೇಶದಲ್ಲಿ ಬಾಧಿತಗೊಂಡು ಮತ್ತು ಅಸಮಧಾನ ವ್ಯಕ್ತಪಡಿಸಿ, ಅದರಿಂದ, ಮಾನ್ಯ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠವು ಮಾನ್ಯ ಏಕಸದಸ್ಯ ನ್ಯಾಯಾಧೀಶರು ನೀಡಿದ ತೀರ್ಪು ಹಾಗೂ ಆದೇಶವನ್ನು ಈ ಮೂಲಕ ರದ್ದುಗೊಳಿಸಿ ವಜಾಮಾಡಿ ಪ್ರತಿವಾದಿಗಳು ತಾವು ವಯೋಸಹಜ ನಿವೃತ್ತಿ ಹೊಂದಿದ ಒಂದು ದಿನ ಮೊದಲು ಅವರು ಗಳಿಸಿದ್ದ ಒಂದು ವಾರ್ಷಿಕ ವೇತನ ಬಡ್ತಿಯನ್ನು ನೀಡಲು ಮೇಲ್ಮನವಿದಾರರಿಗೆ ಸೂಚಿಸಿ ನೌಕರರು–ಪ್ರತಿವಾದಿಗಳು ಸಲ್ಲಿಸಿದ

ಪ್ರಸ್ತುತ ಅಪೀಲಿಗೆ ಮಾನ್ಯ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠವು ಅನುಮತಿ ನೀಡಿದೆ – ಕೆ.ಪಿ.ಟಿ.ಸಿ.ಎಲ್ ಆಡಳಿತ ಮಂಡಳಿ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿದೆ.

2. ನಿರ್ವಿವಾದಿತ ಅಂಶಗಳೆಂದರೆ, ಎಲ್ಲಾ ನೌಕರರು ನಿವೃತ್ತಿಯ ಒಂದು ದಿನ ಮೊದಲು ಹಾಗೂ ನಿವೃತ್ತಿಯ ದಿನಾಂಕದ ಮೊದಲು ಒಂದು ವರ್ಷ ಸೇವೆಯನ್ನು ಪೂರ್ಣಗೊಳಿಸಿದ ಮೇಲೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಗಳಿಸಿದ್ದಾರೆ. ಆದರೂ, ಪಡೆದ ಒಂದು ವೇತನ ಬಡ್ತಿ ಮರುದಿನ ಸೇರಿಕೊಳ್ಳುತ್ತದೆ ಎಂದು ತಿಳಿಸುವ ಕರ್ನಾಟಕ ವಿದ್ಯುಚ್ಚಕ್ತಿ ಮಂಡಳಿ ನೌಕರರ ಸೇವಾ ವಿನಿಯಮಗಳು 1997 ರಲ್ಲಿನ ವಿನಿಯಮ 40(1) (ಇಲ್ಲಿಂದ ವಿನಿಯಮಗಳು ಎಂದು ಉಲ್ಲೇಖಿಸಲಾಗಿದೆ). ಮೇಲ್ಮನವಿದಾರರು ಸಂಬಂಧಪಟ್ಟ ನೌಕರರ ಮೂಲ ರಿಟ್ ಅರ್ಜಿದಾರರು ವಾರ್ಷಿಕ ವೇತನ ಬಡ್ತಿ ಸೇರಿಕೊಂಡ ದಿನದಂದು ಸೇವೆಯಲ್ಲಿ ಇರಲಿಲ್ಲ ಎನ್ನುವ ಆಧಾರದ ಮೇಲೆ ಮೇಲ್ಮನವಿದಾರರು ವಾರ್ಷಿಕ ವೇತನ ಬಡ್ತಿಯನ್ನು ನಿರಾಕರಿಸಿದ್ದಾರೆ. ವಾರ್ಷಿಕ ವೇತನ ಬಡ್ತಿಯನ್ನು ಕೇಳಿ, ಮೂಲ ರಿಟ್ ಅರ್ಜಿದಾರರು ಸಲ್ಲಿಸಿದ ರಿಟ್ ಅರ್ಜಿಯನ್ನು ಮಾನ್ಯ ಏಕ ಸದಸ್ಯ ನ್ಯಾಯಾಧೀಶರಿಂದ ವಜಾಮಾಡಲಾಗಿದೆ. ಪ್ರಶ್ನಿತ ತೀರ್ಮ ಹಾಗೂ ಆದೇಶ ಹಾಗೂ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ಪ್ರಕರಣ **ಭಾರತದ ಒಕ್ಕೂಟ ಹಾಗೂ ಇತರರು ವಿರುದ್ಧ ಆರ್.ಮಲಕೊಂಡಯ್ಯ ಹಾಗೂ ಇತರರು 2002(4) ಎಎಲ್‌ಟಿ 550 (ಡಿ.ಬಿ.)** ರಲ್ಲಿ ವರದಿಯಾದ ಹಾಗೂ ಇತರ ಉಚ್ಚ ನ್ಯಾಯಾಲಯಗಳ

ನಿರ್ಣಯಗಳನ್ನು ಆಧರಿಸಿ, ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಪ್ರಸ್ತುತ ಮೇಲ್ಮನವಿಗೆ ಅನುಮತಿ ನೀಡಿದೆ ಹಾಗೂ ಸಂಬಂಧಿತ ಉದ್ಯೋಗಿಗಳು ತಮ್ಮ ನಿವೃತ್ತಿಗೆ ಮೊದಲು ಒಂದು ವರ್ಷದ ಸೇವೆ ಸಲ್ಲಿಸಿದ್ದಕ್ಕಾಗಿ ವೇತನ ಬಡ್ತಿಯನ್ನು ಗಳಿಸಿದ್ದಾರೆ ಎಂದು ಗಮನಿಸುವ ಮೂಲಕ ಆಯಾ ಉದ್ಯೋಗಿಗಳು ಪ್ರತಿವಾದಿಗಳಿಗೆ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡುವಂತೆ ಮೇಲ್ಮನವಿದಾರರಿಗೆ ಸೂಚಿಸಿದೆ.

2.1 ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠ ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಆದೇಶದಿಂದ ಬಾಧಿತ ಹಾಗೂ ಅಸಮಾಧಾನಗೊಂಡ ಆಡಳಿತ ಮಂಡಳಿ–ಕೆಪಿಟಿಸಿಎಲ್, ಪ್ರಸ್ತುತ ಮನವಿಯನ್ನು ಸಲ್ಲಿಸಿದೆ.

3. ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ಶ್ರೀಹುಜೆಫಾ ಅಹ್ಮದಿ ಮತ್ತು ಸಂಬಂಧಿತ ಸಿಬ್ಬಂದಿ ಪ್ರತಿವಾದಿಗಳ ಪರವಾಗಿ ವಕೀಲರಾದ ಶ್ರೀ ಮಲ್ಲಿಕಾರ್ಜುನ ಎಸ್.ಮೈಲಾರ್ ರವರು ಹಾಜರಾಗಿದ್ದಾರೆ.

3.1 ಮೇಲ್ಮನವಿದಾರರ / ಅರ್ಜಿದಾರರ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲರಾದ ಶ್ರೀ ಅಹ್ಮದಿಯವರು, **ಮೇಲೆ ಹೇಳಿರುವ ಆರ್.ಮಲಕೊಂಡಯ್ಯ** ಪ್ರಕರಣದಲ್ಲಿ ಆಂಧ್ರಪ್ರದೇಶ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪ್ರಶ್ನಿತ ತೀರ್ಪು ಮತ್ತು ಆದೇಶವನ್ನು ಹೊರಡಿಸುವಾಗ ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠವು

ಅವಲಂಬಿಸಿತ್ತು ಎಂದು ತೀವ್ರವಾಗಿ ಮಂಡಿಸಿದ್ದಾರೆ ಇದನ್ನು ನಂತರ ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ಪೂರ್ಣ ನ್ಯಾಯಪೀಠವು **2005(2) ಎಲ್‌ಎಲ್‌ಎನ್ 592ರಲ್ಲಿ ವರದಿಯಾಗಿರುವ ಪ್ರಧಾನ ಮಹಾಲೇಖಪಾಲರು, ಆಂಧ್ರ ಪ್ರದೇಶ ಹಾಗೂ ಇನ್ನೊಬ್ಬರು ವಿರುದ್ದ ಸಿ.ಸುಬ್ಬರಾವ್** ಪ್ರಕರಣದಲ್ಲಿ ತಳ್ಳಿಹಾಕಿದೆ.

3.2 ಮುಂದುವರೆದು, ಮೇಲ್ಮನವಿದಾರರ ಪರವಾಗಿ ಹಾಜರಾದ ವಕೀಲರಾದ ಶ್ರೀ ಅಹ್ಮದಿಯವರು ಈ ವಿಷಯದ ಬಗ್ಗೆ ವಿವಿಧ ಉಚ್ಚ ನ್ಯಾಯಾಲಯಗಳ ವಿಭಿನ್ನ ಅಭಿಪ್ರಾಯಗಳಿವೆ ಎಂದು ಮಂಡಿಸಿದ್ದಾರೆ. ಮದ್ರಾಸ್ ಉಚ್ಚ ನ್ಯಾಯಾಲಯ, ದೆಹಲಿ ಉಚ್ಚ ನ್ಯಾಯಾಲಯ, ಅಲಹಾಬಾದ್ ಉಚ್ಚ ನ್ಯಾಯಾಲಯ, ಮಧ್ಯಪ್ರದೇಶ ಉಚ್ಚ ನ್ಯಾಯಾಲಯ, ಗುಜರಾತ್ ಉಚ್ಚ ನ್ಯಾಯಾಲಯಗಳು ಆಂಧ್ರಪ್ರದೇಶ ಉಚ್ಚ ನ್ಯಾಯಾಲಯ, ಕೇರಳ ಉಚ್ಚ ನ್ಯಾಯಾಲಯ ಹಾಗೂ ಹಿಮಾಚಲ ಉಚ್ಚ ನ್ಯಾಯಾಲಯ ಪೂರ್ಣ ಪೀಠದ ಅಭಿಪ್ರಾಯಕ್ಕೆ ವಿರುದ್ಧವಾದ ನಿಲುವನ್ನು ತೆಗೆದುಕೊಂಡಿವೆ ಎಂದು ಮಂಡಿಸಲಾಗಿದೆ. **ಪಿ. ಅಯ್ಯಂಪೆರುಮಾಲ್ ವಿರುದ್ಧ ರಿಜಿಸ್ಟ್ರಾರ್ ಹಾಗೂ ಇತರರು (ದಿನಾಂಕ 15.09.2017 ರಂದು ಆದೇಶವಾದ ಡಬ್ಲ್ಯೂಪಿ ಸಂಖ್ಯೆ: 15732/2017)** ಪಕರಣದಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪನ್ನು ವಿವಿಧ ಉಚ್ಚ ನ್ಯಾಯಾಲಯಗಳು ಅನುಸರಿಸಿವೆ ಎಂದು ಮಂಡಿಸಲಾಗಿದೆ.

3.3 ಅರ್ಹತೆಗಳ ಆಧಾರದ ಮೇಲೆ, ಮೇಲ್ಮನವಿದಾರರ ಪರವಾಗಿ ಹಾಜರಾಗಿರುವ ಹಿರಿಯ ವಕೀಲರಾದ ಶ್ರೀ ಅಹ್ಮದಿಯವರು ವಿನಿಯಮಗಳ ವಿನಿಯಮ 40(1) ರಲ್ಲಿ ಬಳಸಲಾದ ಪದಗಳು ಬಹಳ ಸ್ಪಷ್ಟ ಹಾಗೂ ನಿಶ್ಚಿತವಾಗಿವೆ ಎಂದು ಬಲವಾಗಿ ಮಂಡಿಸಿದ್ದಾರೆ. ಇದು ನಿರ್ದಿಷ್ಟವಾಗಿ "ಒಂದು ವೇತನ ಬಡ್ತಿ ಗಳಿಸಿದ ಮರುದಿನ ವೇತನ ಹೆಚ್ಚಳವನ್ನು ಸಂಪೂರ್ಣವಾಗಿ ಒದಗಿಸುತ್ತದೆ ಎಂದು ಮಂಡಿಸಲಾಗಿದೆ". ಆದ್ದರಿಂದ, ವೇತನ ಹೆಚ್ಚಳದ ಹಕ್ಕು ದೊರೆತಾಗ ಉದ್ಯೋಗಿ ಸೇವೆಯಲ್ಲಿರಬೇಕು ಎಂದು ಮಂಡಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಆಯಾ ಪ್ರತಿವಾದಿಗಳ ಪರವಾಗಿ ವೇತನ ಹೆಚ್ಚಳದ ಹಕ್ಕು ಲಭಿಸಿದಾಗ ಅವರು ಸೇವೆಯಲ್ಲಿರಲಿಲ್ಲ ಆದರೆ ಸೇವೆಗಳಿಂದ ವಯೋಸಹಜ ನಿವೃತ್ತಿ ಹೊಂದಿದ್ದರು ಎಂದು ಮಂಡಿಸಲಾಗಿದೆ. ಆದ್ದರಿಂದ, ಅವರು ಒಂದು ದಿನ ಮುಂಚಿತವಾಗಿ ಅಂದರೆ ತಮ್ಮ ಸೇವೆಯ ಕೊನೆಯ ದಿನದಂದು ಗಳಿಸಬಹುದಾದ ವಾರ್ಷಿಕ ವೇತನ ಹೆಚ್ಚಳಕ್ಕೆ ಅರ್ಹರಾಗಿರುವುದಿಲ್ಲ ಎಂದು ಮಂಡಿಸಲಾಗಿದೆ.

3.4 ಮೇಲ್ಮನವಿದಾರರ ಪರವಾಗಿ ಹಾಜರಾದ ಹಿರಿಯ ವಕೀಲರಾದ ಶ್ರೀ ಅಹಮ್ಮದಿಯವರು ವಾರ್ಷಿಕ ವೇತನ ಬಡ್ತಿ ಉತ್ತಮ ಸೇವೆಯ ರೂಪದಲ್ಲಿ ಇದೆ ಮತ್ತು ಸಂಬಂಧಿತ ಉದ್ಯೋಗಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಮತ್ತು ಉತ್ತಮ ಸೇವೆಗಳನ್ನು ಒದಗಿಸಲು ಇದು ಪ್ರೋತ್ಸಾಹಕವಾಗಿದೆ ಎಂದು ಮಂಡಿಸಿದ್ದಾರೆ.

ಆದ್ದರಿಂದ, ಸಂಬಂಧಿತ ಉದ್ಯೋಗಿಗಳು ತಮ್ಮ ನಿವೃತ್ತಿಯ ಕಾರಣದಿಂದಾಗಿ ಸೇವೆಯಲ್ಲಿ ಇಲ್ಲದಿದ್ದಾಗ, ಯಾವುದೇ ವಾರ್ಷಿಕ ಹೆಚ್ಚಳವನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಮಂಡಿಸಲಾಗಿದೆ, ಇದು ಉದ್ಯೋಗಿಯ ಉತ್ತಮ ಕಾರ್ಯಕ್ಷಮತೆಯನ್ನು ಪ್ರೋತ್ಸಾಹಿಸುವ ಪ್ರೋತ್ಸಾಹಕ ರೂಪದಲ್ಲಿದೆ.

3.5 ಮೇಲ್ಮನವಿದಾರರ ಪರವಾಗಿ ಹಾಜರಾದ ಹಿರಿಯ ವಕೀಲರಾದ ಶ್ರೀ ಅಹ್ಮದಿಯವರು, ಕಾನೂನು ನಿಘಂಟಿನಲ್ಲಿ (ವಿಶ್ವ ಕಾನೂನು ಶಬ್ದಕೋಶ) "accrue" ಎಂಬ ಪದದ ವ್ಯಾಖ್ಯಾನಕ್ಕೆ ಮತ್ತು "increment" ಎಂಬ ಪದದ ವ್ಯಾಖ್ಯಾನಕ್ಕೆ ನಮ್ಮ ಗಮನ ಸೆಳೆದಿದ್ದಾರೆ. ಕಾನೂನು ನಿಘಂಟಿನ ಪ್ರಕಾರ, ಹೆಚ್ಚಳ ಎಂದರೆ ಪ್ರಮಾಣ ಅಥವಾ ಮೌಲ್ಯದಲ್ಲಿನ ಹೆಚ್ಚಳ, ಅಂದರೆ ಕೆಳಗಿನ ದರ್ಜೆಯಿಂದ ಮೇಲಿನ ದರ್ಜೆಗೆ ಬಡ್ತಿ. "increment" ಎಂದರೆ ವ್ಯಾಖ್ಯಾನದ ಪ್ರಕಾರ ಏನನ್ನಾದರೂ ಮೇಲ್ಮುಖವಾಗಿ ಬದಲಾಯಿಸುವುದು ಎಂದರ್ಥ. ಕಾನೂನು ನಿಘಂಟಿನ ಪ್ರಕಾರ "accrue" ಎಂಬ ಪದದ ಅರ್ಥವು ಜಾರಿಗೆ ತರಬಹುದಾದ ಅಧಿಕಾರ ಅಥವಾ ಹಕ್ಕು ಎಂದು ಅರ್ಥೈಸುತ್ತದೆ ಎಂದು ಮಂಡಿಸಲಾಗಿದೆ. ಆದ್ದರಿಂದ, ವಿನಿಯಮಗಳ 40(1)ನೇ ನಿಯಮದ ನಿಜವಾದ ವ್ಯಾಖ್ಯಾನದ ಮೇಲೆ, ಅದು ಗಳಿಸಿದ ಮರುದಿನ ಹೆಚ್ಚಳ ಆಗುತ್ತದೆ ಎಂದು ಮಂಡಿಸಲಾಗಿದೆ. ಆದ್ದರಿಂದ, ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠವು ಬಹುಮಟ್ಟಿಗೆ ತಪ್ಪು ಎಸಗಿದೆ ಎಂದು ಮಂಡಿಸಲಾಗಿದೆ. ಆದ್ದರಿಂದ

ಸಂಬಂಧಿತ ನೌಕರರು ತಮ್ಮ ನಿವೃತ್ತಿಗೆ ಒಂದು ದಿನ ಮೊದಲು ಗಳಿಸಿದ ಒಂದು ವಾರ್ಷಿಕ ವೇತನ ಬಡ್ತಿ ಪ್ರಯೋಜನಕ್ಕೆ ಅರ್ಹರಾಗಿರುತ್ತಾರೆ ಎಂದು ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠ ಹಾಗೂ ಇತರ ಉಚ್ಚ ನ್ಯಾಯಾಲಯಗಳು ತೆಗೆದುಕೊಂಡ ಅಭಿಪ್ರಾಯ ತಪ್ಪಾಗಿದೆ ಮತ್ತು ಸೂಕ್ತ ಶಾಸನಬದ್ಧ ವಿನಿಯಮಗಳ ತಪ್ಪಾದ ವ್ಯಾಖ್ಯಾನವಾಗಿದೆ ಎಂದು ಮಂಡಿಸಲಾಗಿದೆ. ಮೇಲಿನ ಹೇಳಿಕೆಯನ್ನು ನೀಡುವಾಗ, ಪ್ರಸ್ತುತ ಮನವಿಯನ್ನು ಅನುಮತಿಸುವಂತೆ ಪ್ರಾರ್ಥಿಸಲಾಗಿದೆ.

4. ಸಂಬಂಧಿತ ಉದ್ಯೋಗಿಗಳು–ಪ್ರತಿವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮೇಲೆ ತಿಳಿಸಲಾದ **ಪಿ. ಅಯ್ಯಂಪೆರುಮಲ್** ಪ್ರಕರಣದಲ್ಲಿ, ಮದ್ರಾಸ್ ಉಚ್ಚ ನ್ಯಾಯಾಲಯ ನೀಡಿದ್ದ ತೀರ್ಪು ಅನಂತರ ಗುಜರಾತ್ ಉಚ್ಚ ನ್ಯಾಯಾಲಯ, ದೆಹಲಿ ಉಚ್ಚ ನ್ಯಾಯಾಲಯ, ಅಲಹಾಬಾದ್ ಉಚ್ಚ ನ್ಯಾಯಾಲಯ, ಮಧ್ಯಪ್ರದೇಶ ಉಚ್ಚ ನ್ಯಾಯಾಲಯ, ಹಾಗೂ ಒರಿಸ್ಸಾ ಉಚ್ಚ ನ್ಯಾಯಾಲಯಗಳ ನಿರ್ಧಾರಗಳನ್ನು ಆಧರಿಸಿ, ತಮ್ಮ ನಿವೃತ್ತಿಗೆ ಮುಂಚಿತವಾಗಿ ಒಂದು ವರ್ಷದ ಸೇವೆ ಸಲ್ಲಿಸಿದ್ದಕ್ಕಾಗಿ ವಾರ್ಷಿಕ ವೇತನ ಹೆಚ್ಚಳವನ್ನು ಗಳಿಸಿದ ಸಂಬಂಧಿತ ಉದ್ಯೋಗಿಗಳಿಗೆ ಅವರು ವಾಸ್ತವವಾಗಿ ಗಳಿಸಿದ ವಾರ್ಷಿಕ ವೇತನ ಹೆಚ್ಚಳದ ಪ್ರಯೋಜನವನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಆಯಾ ನೌಕರರು ವಾಸ್ತವವಾಗಿ

ಗಳಿಸಿದ ವಾರ್ಷಿಕ ವೇತನ ಹೆಚ್ಚಳಕ್ಕೆ ಅವಕಾಶ ನೀಡುವಲ್ಲಿ ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠ ಯಾವುದೇ ತಪ್ಪು ಮಾಡಿಲ್ಲ ಎಂದು ಮಂಡಿಸಲಾಗಿದೆ.

4.1 ಮೇಲಿನ ಹೇಳಿಕೆಯನ್ನು ನೀಡುತ್ತಾ, ಪ್ರಸ್ತುತ ಮನವಿಯನ್ನು ವಜಾಗೊಳಿಸುವಂತೆ ಪ್ರಾರ್ಥಿಸಲಾಗಿದೆ.

5. ನಾವು ಆಯಾ ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯಾವಾದಿಗಳ ವಾದಗಳನ್ನು ಆಲಿಸಿದ್ದೇವೆ.

6. ಈ ನ್ಯಾಯಾಲಯದ ಪರಿಗಣನೆಗೆ ಬರುವ ಸಣ್ಣ ಪ್ರಶ್ನೆಯೆಂದರೆ ವಾರ್ಷಿಕ ವೇತನ ಬಡ್ತಿಯನ್ನು ಗಳಿಸಿದ ಉದ್ಯೋಗಿ ವೇತನ ಹೆಚ್ಚಳವನ್ನು ಗಳಿಸಿದ ಮರುದಿನವೇ ನಿವೃತ್ತನಾಗಿದ್ದರ ಹೊರತಾಗಿಯೂ ಅದಕ್ಕೆ ಅರ್ಹನೇ?

6.1 ಪ್ರಸ್ತುತ ಪ್ರಕರಣದಲ್ಲಿ, ಸಂಬಂಧಿತ ಉಪಬಂದವು ವಿನಿಯಮಗಳ ವಿನಿಯಮ 40(1) ಆಗಿದೆ ಹಾಗೂ ಅದು ಈ ಕೆಳಗಿನಂತಿದೆ:–

> **"ವೇತನ ಬಡ್ತಿಯನ್ನು ಪಡೆಯುವಿಕೆ ಹಾಗೂ ಮುಂದೂಡಿಕೆ**
>
> 40(1) ಒಂದು ವೇತನ ಬಡ್ತಿಯನ್ನು ಗಳಿಸಿದ ಮರು ದಿನವೇ ಅದು ಕೂಡಿಬರುತ್ತದೆ. ಗಳಿಸಿದ ವೇತನ ಬಡ್ತಿಯನ್ನು ತಡೆಹಿಡಿಯದ ಹೊರತು ಸಹಜವಾಗಿ ಸೆಳೆಯಲಾಗುತ್ತದೆ. ಒಬ್ಬ ಉದ್ಯೋಗಿಯ ನಡವಳಿಕೆ ಉತ್ತಮವಾಗಿರದಿದ್ದರೆ ಅಥವಾ ಅವನ ಕೆಲಸ ತೃಪ್ತಿಕರವಾಗಿರದಿದ್ದರೆ, ಸಕ್ಷಮ ಪ್ರಾಧಿಕಾರವು ಅವನ ವೇತನ ಹೆಚ್ಚಳವನ್ನು ತಡೆಹಿಡಿಯಬಹುದು.

ವೇತನ ಹೆಚ್ಚಳವನ್ನು ತಡೆಹಿಡಿಯುವ ಆದೇಶದಲ್ಲಿ, ತಡೆಹಿಡಿಯುವ ಪ್ರಾಧಿಕಾರವು ಅದನ್ನು ಎಷ್ಟು ಅವಧಿಗೆ ತಡೆಹಿಡಿಯಲಾಗಿದೆ ಮತ್ತು ಮುಂದೂಡಿಕೆಯು ಭವಿಷ್ಯದ ವೇತನ ಬಡ್ತಿಗಳನ್ನು ಮುಂದುಡುವ ಪರಿಣಾಮವನ್ನು ಹೊಂದಿದೆಯೇ ಎಂಬುದನ್ನು ಹೇಳಬೇಕು".

6.2 ಮೇಲ್ಮನವಿದಾರರ ಪರವಾಗಿ, ವಿನಿಯಮ 40(1) ರಲ್ಲಿ ಬಳಸಲಾದ ಪದವು ಅದು ಗಳಿಸಿದ ಮರು ದಿನ ಹೆಚ್ಚಳವಾಗುತ್ತದೆ ಮತ್ತು ಪ್ರಸ್ತುತ ಸಂದರ್ಭದಲ್ಲಿ ಅವರು ನಿವೃತ್ತಿಯಾದ ದಿನದಿಂದ ಹೆಚ್ಚಳವಾಗುತ್ತದೆ ಆದರೆ, ಆ ದಿನ ಅವರು ಸೇವೆಯಲ್ಲಿ ಇರಲಿಲ್ಲ ಇದರಿಂದಾಗಿ, ಅವರು ಒಂದು ದಿನ ಮೊದಲು ಗಳಿಸಬಹುದಾದ ವಾರ್ಷಿಕ ಹೆಚ್ಚಳಕ್ಕೆ ಅರ್ಹತೆ ಹೊಂದಿಲ್ಲ. ಮೇಲ್ಮನವಿದಾರರ ಪರವಾಗಿ, ವೇತನ ಹೆಚ್ಚಳವು ಪ್ರೋತ್ಸಾಹಕ ರೂಪದಲ್ಲಿರುವುದರಿಂದ ಮತ್ತು ಸದರಿ ನೌಕರರು ಸೇವೆಯಲ್ಲಿರದಿದ್ದಾಗ ಅವರಿಗೆ ಯಾವುದೇ ವಾರ್ಷಿಕ ವೇತನ ಬಡ್ತಿಯನ್ನು ನೀಡುವ ಪ್ರಶ್ನೆಯೇ ಇಲ್ಲ.

6.3 ಈ ಹಂತದಲ್ಲಿ, ಪ್ರಸ್ತುತ ವಿಷಯದ ಬಗ್ಗೆ ವಿವಿಧ ಉಚ್ಚ ನ್ಯಾಯಾಲಯಗಳ ವಿಭಿನ್ನ ಅಭಿಪ್ರಾಯಗಳಿವೆ ಎಂಬುದನ್ನು ಗಮನಿಸಬೇಕಾಗಿದೆ. ಆಂಧ್ರಪ್ರದೇಶ ಉಚ್ಚ ನ್ಯಾಯಾಲಯ, ಹಿಮಾಚಲ ಪ್ರದೇಶ ಉಚ್ಚ ನ್ಯಾಯಾಲಯ ಮತ್ತು ಕೇರಳ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ವ್ಯತಿರಿಕ್ತ ಅಭಿಪ್ರಾಯವನ್ನು ತೆಗೆದುಕೊಂಡಿದೆ ಮತ್ತು ಮೇಲ್ಮನವಿದಾರರ ಪರ ಬೆಂಬಲಕೋರಿದ ಅಭಿಪ್ರಾಯವನ್ನು ತೆಗೆದುಕೊಂಡಿದೆ. ಮತ್ತೊಂದೆಡೆ, ಮೇಲೆ ತಿಳಿಸಲಾದ **ಪಿ ಅಯ್ಯಂಪೆರುಮಾಳ್** ಪ್ರಕರಣದಲ್ಲಿ ಮದ್ರಾಸ್

ಉಚ್ಚ ನ್ಯಾಯಾಲಯ, **ಗೋಪಾಲ್ ಸಿಂಗ್ ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು (ದಿನಾಂಕ: 23.01.2020 ರಂದು ತೀರ್ಪು ನೀಡಲಾದ ರಿಟ್ ಅರ್ಜಿ(ಸಿ) ಸಂಖ್ಯೆ: 10509/2019)** ಪ್ರಕರಣದಲ್ಲಿ ದೆಹಲಿ ಉಚ್ಚ ನ್ಯಾಯಾಲಯ; **ನಂದ ವಿಜಯ್ ಸಿಂಗ್ ಹಾಗೂ ಇತರರು ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು (ದಿನಾಂಕ: 29–06–2021 ರಂದು ತೀರ್ಪು ನೀಡಲಾದ ರಿಟ್ ಅರ್ಜಿ ಸಂಖ್ಯೆ: 13299/2020)** ಪ್ರಕರಣದಲ್ಲಿ ಅಲಹಬಾದ್ ಉಚ್ಚ ನ್ಯಾಯಾಲಯ; **ಯೋಗೆಂದ್ರ ಸಿಂಗ್ ಬಡೌರಿಯ ಹಾಗೂ ಇತರರು ವಿರುದ್ಧ ಮಧ್ಯಪ್ರದೇಶ ರಾಜ್ಯ** ಪ್ರಕರಣದಲ್ಲಿ ಮಧ್ಯಪ್ರದೇಶ ಉಚ್ಚ ನ್ಯಾಯಾಲಯ; **ಎಎಫ್‌ಆರ್ ಅರುಣಕುಮಾರ್ ಬಿಸ್ವಾಲ್ ವಿರುದ್ಧ ಒಡಿಸ್ಸಾ ರಾಜ್ಯ ಹಾಗೂ ಇನ್ನೊಬ್ಬ (ದಿನಾಂಕ: 30–07–2021 ರಂದು ಆದೇಶವಾದ ರಿಟ್ ಅರ್ಜಿ ಸಂಖ್ಯೆ: 17715/2020)** ಪ್ರಕರಣದಲ್ಲಿ ಒರಿಸ್ಸಾ ಉಚ್ಚ ನ್ಯಾಯಾಲಯ ಹಾಗೂ **ಗುಜರಾತ್ ರಾಜ್ಯ ವಿರುದ್ಧ ತಾಕತ್‌ಸಿನ್ಹ ಸೊಂಗಾರ (ಲೆಟರ್ಸ್ ಪೆಟೆಂಟ್ ಮನವಿ ಸಂಖ್ಯೆ: 868/2021)** ಪ್ರಕರಣದಲ್ಲಿ ಗುಜರಾತ್ ಉಚ್ಚ ನ್ಯಾಯಾಲಗಳು ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ಪೂರ್ಣ ನ್ಯಾಯಪೀಠ ತೆಗೆದುಕೊಂಡ ಅಭಿಪ್ರಾಯಕ್ಕಿಂತ ಒಂದು ವಿಭಿನ್ನ ಅಭಿಪ್ರಾಯ ತೆಗೆದುಕೊಂಡಿವೆ ಹಾಗೂ ಒಮ್ಮೆ ಒಂದು ವರ್ಷದ ಸೇವೆಯನ್ನು ಪೂರ್ಣಗೊಳಿಸಿದ ಮೇಲೆ ನಿವೃತ್ತಿಯ ಮರುದಿನ ಮತ್ತು / ಅಥವಾ ನಿವೃತ್ತಿಯ ದಿನದಂದು ವಾರ್ಷಿಕ ವೇತನ ಬಡ್ತಿಯನ್ನು ಗಳಿಸಿದ್ದರೆ ಅಂತಹ ಪ್ರಯೋಜನವನ್ನು ನೌಕರನಿಗೆ ನಿರಾಕರಿಸಲಾಗದು ಎಂದು ತೀರ್ಪು ನೀಡಿವೆ.

6.4 ಈಗ ಅಪೀಲುದಾರರ ಪರವಾಗಿ ಸಲ್ಲಿಸುವ ವಾರ್ಷಿಕ ವೇತನ ಹೆಚ್ಚಳ ಪ್ರೋತ್ಸಾಹಕ ರೂಪದಲ್ಲಿರುತ್ತದೆ ಮತ್ತು ಉದ್ಯೋಗಿ ಉತ್ತಮವಾಗಿ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸುತ್ತದೆ ಮತ್ತು ಒಮ್ಮೆ ಅವನು ಸೇವೆಯಲ್ಲಿ ಇಲ್ಲದಿದ್ದರೆ, ವಾರ್ಷಿಕ ವೇತನ ಹೆಚ್ಚಳವನ್ನು ಮಂಜೂರು ಮಾಡುವ ಪ್ರಶ್ನೆಯೇ ಇಲ್ಲ. ಒಂದು ನಿರ್ದಿಷ್ಟ ಸಂದರ್ಭದಲ್ಲಿ, ನೌಕರನು ತನ್ನ ನಿವೃತ್ತಿಯ ದಿನಂಕಕ್ಕಿಂತ ಮೂರು ದಿನಗಳ ಮೊದಲು ವೇತನ ಹೆಚ್ಚಳವನ್ನು ಗಳಿಸಬಹುದು ಮತ್ತು ಇದೆ ವಿನಿಯಮ 40(1) ರ ಪ್ರಕಾರ ಅನಂತರ ದಿನವೂ ವೇತನ ಹೆಚ್ಚಳ ಆಗುತ್ತದೆ ಮತ್ತು ಆ ಸಂದರ್ಭದಲ್ಲಿ ಅಂತಹ ಉದ್ಯೋಗಿಗೆ ನಂತರ ಒಂದು ವರ್ಷದ ಸೇವೆ ಇರುವುದಿಲ್ಲ. ಒಂದು ವರ್ಷ ಸೇವೆ ಸಲ್ಲಿಸಿದ ಅವಧಿಗೆ ವಾರ್ಷಿಕ ವೇತನ ನಿಗದಿತ ಬಡ್ತಿ ಗಳಿಸಿರುವುದನ್ನು ಗಮನಿಸಬೇಕು. ಆದುದರಿಂದ, ಈ ಮೇಲ್ಕಂಡ ಅರ್ಜಿಯನ್ನು ಅಂಗೀಕರಿಸಲಾಗುವುದಿಲ್ಲ.

6.5 ಈಗ ಮೇಲ್ಮನವಿದಾರರ ಪರವಾಗಿ ಸಲ್ಲಿಸಿರುವ ವಿಷಯದ ಪ್ರಕಾರ ವೇತನ ಹೆಚ್ಚಳವು ಗಳಿಸಿದ ಮರುದಿನವೇ ಆಗಿರುವುದರಿಂದ ಮತ್ತು ಆದ್ದರಿಂದ, ಒಬ್ಬ ಉದ್ಯೋಗಿ ತನ್ನ ನಿವೃತ್ತಿಗೆ ಒಂದು ದಿನ ಮೊದಲು ವೇತನ ಹೆಚ್ಚಳವನ್ನು ಗಳಿಸಿದ್ದರೂ ಅವರು ಸೇವೆಯಲ್ಲಿ ಇಲ್ಲದಿದ್ದಲ್ಲಿ, ಮೇಲೆ ತಿಳಿಸಿದ ವಿಷಯವನ್ನು ಪರಿಗಣಿಸುವಾಗ, ಉದ್ದೇಶ ಮತ್ತು ವಾರ್ಷಿಕ ವೇತನ ಬಡ್ತಿಯ ಉದ್ದೇಶವನ್ನು ಪರಿಗಣಿಸಬೇಕಾಗುತ್ತದೆ. ಒಬ್ಬ ಸರ್ಕಾರಿ ನೌಕರನಿಗೆ ಒಂದು ವರ್ಷದ ಸೇವೆ ಸಲ್ಲಿಸುವಾಗ ಅವನ ಉತ್ತಮ

ನಡವಳಿಕೆಯ ಅಧಾರದ ಮೇಲೆ ವಾರ್ಷಿಕ ವೇತನ ಬಡ್ತಿ ನೀಡಲಾಗುತ್ತದೆ. ಶಿಕ್ಷೆಯು ಕ್ರಮ ಅಥವಾ ದಕ್ಷತೆಯೊಂದಿಗೆ ಸಂಬಂಧಿಸಿದ ಹೊರತು ಉತ್ತಮ ನಡವಳಿಕೆ ಹೊಂದಿರುವ ಅಧಿಕಾರಿಗಳಿಗೆ ವಾರ್ಷಿಕವಾಗಿ ವೇತನ ಬಡ್ತಿ ನೀಡಲಾಗುತ್ತದೆ. ಹೀಗೆ ಒಂದು ವರ್ಷ /ನಿಗದಿತ ಅವಧಿಯಲ್ಲಿ ಉತ್ತಮ ನಡವಳಿಕೆಯೊಂದಿಗೆ ಸೇವೆ ಸಲ್ಲಿಸಿದ್ದಕ್ಕಾಗಿ ವಾರ್ಷಿಕ ವೇತನ ಬಡ್ತಿ ನೀಡಲಾಗುತ್ತದೆ. ಆದ್ದರಿಂದ, ಸರಕಾರಿ ನೌಕರನು ಉತ್ತಮ ನಡತೆಯೊಂದಿಗೆ ನಿರ್ದಿಷ್ಟ ಅವಧಿಗೆ ಸೇವೆ ಸಲ್ಲಿಸಿದ ಕ್ಷಣದಲ್ಲಿ, ಕಾಲಮಾನದಲ್ಲಿ, ಅವನು ನಿರ್ದಿಷ್ಟ ಅವಧಿಯ ಸೇವೆಯನ್ನು ಉತ್ತಮ ನಡತೆಯೊಂದಿಗೆ ಮಾಡಿದ್ದಕ್ಕಾಗಿ ವಾರ್ಷಿಕ ವೇತನ ಬಡ್ತಿಯನ್ನು ಗಳಿಸಿದ್ದಾನೆ ಎಂದು ಹೇಳಬಹುದು. ಅದ್ದರಿಂದ ಒಂದು ನಿರ್ದಿಷ್ಟ ಅವಧಿಗೆ (ಒಂದು ವರ್ಷ) ಉತ್ತಮ ನಡವಳಿಕೆಯೊಂದಿಗೆ ಸೇವೆ ಸಲ್ಲಿಸಿದ್ದಕ್ಕಾಗಿ ವಾರ್ಷಿಕ ವೇತನ ಬಡ್ತಿ ಪ್ರಯೋಜನಕ್ಕೆ ಅರ್ಹರಾಗಿರುತ್ತಾರೆ. ಸರ್ಕಾರಿ ನೌಕರನು ಮರುದಿನವೇ ನಿವೃತ್ತನಾಗಿರುವುದರಿಂದ, ಅವನು ಗಳಿಸಿದ ವಾರ್ಷಿಕ ವೇತನ ಬಡ್ತಿಯನ್ನು ಹೇಗೆ ನಿರಾಕರಿಸಬಹುದು ಮತ್ತು / ಅಥವಾ ಹಿಂದಿನ ಒಂದು ವರ್ಷದಲ್ಲಿ ಉತ್ತಮ ನಡವಳಿಕೆ ಮತ್ತು ದಕ್ಷತೆಯಿಂದ ಸೇವೆ ಸಲ್ಲಿಸಿದ್ದರಿಂದ ಅರ್ಹನಾಗಿರುತ್ತಾನೆ. ಮೇಲೆ ತಿಳಿಸಲಾದ **ಗೋಪಾಲ ಸಿಂಗ್** ಪ್ರಕರಣದ ಖಂಡಿಕೆ 20, 23 ಹಾಗೂ 24 ರಲ್ಲಿ, ದೆಹಲಿ ಉಚ್ಚ ನ್ಯಾಯಾಲಯ ಈ ಕೆಳಗಿನಂತೆ ಗಮನಿಸಿ ತೀರ್ಪು ನೀಡಿದೆ:–

(ಖಂಡಿಕೆ 20)

"ಕೇಂದ್ರ ಸರಕಾರಿ ನೌಕರರ ವೇತನ ಮತ್ತು ವೇತನ ಬಡ್ತಿಯನ್ನು ಎಫ್.ಆರ್., ಸಿಎಸ್ಆರ್ ಹಾಗೂ ಕೇಂದ್ರ ನಾಗರಿಕ ಸೇವೆಗಳ (ಪಿಂಚಣಿ) ನಿಯಮಗಳ ಮೂಲಕ ನಿಯಂತ್ರಿಸಲಾಗುತ್ತದೆ. ಎಫ್.ಆರ್.9(21) ರಲ್ಲಿ ವೇತನ ಎಂದರೆ ಕೇಂದ್ರ ಸರಕಾರಿ ನೌಕರರು ಮಾಸಿಕ ಪಡೆಯುವ ವೇತನ ಮತ್ತು ವೇತನ ಬಡ್ತಿ. ಅನ್ವಯವಾಗುವ ವಿನಿಯಮಗಳ ಸರಳ ಸಮಗ್ರ ಓದುವಿಕೆಯು ಸರ್ಕಾರಿ ಸೇವಕನಿಗೆ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಲು ಅನುವು ಮಾಡಿಕೊಡುವ ಸಲುವಾಗಿ ವಾರ್ಷಿಕ ವೇತನ ಬಡ್ತಿಯನ್ನು ನೀಡಲಾಗುತ್ತದೆ ಮತ್ತು ವೇತನ ಹಾಗೂ ಬಡ್ತಿಗಳನ್ನು ಸಹ ಹುದ್ದೆಗೆ ಲಗತ್ತಿಸಲಾಗುತ್ತದೆ ಎಂಬ ಬಗ್ಗೆ ಯಾವುದೇ ಅಸ್ಪಷ್ಟತೆ ಇಲ್ಲ. ಸಿಎಸ್ಆರ್ ದ 43 ನೇ ವಿಧಿಯು ಪ್ರಗತಿಪರ ನೇಮಕಾತಿಯನ್ನು 'ಅಧಿಕಾರಿಯೊಬ್ಬರ ಉತ್ತಮ ನಡವಳಿಕೆಗೆ ಒಳಪಟ್ಟು ವೇತನವು ಪ್ರಗತಿಪರವಾಗಿರುವ ನೇಮಕಾತಿ' ಎಂದು ವ್ಯಾಖ್ಯಾನಿಸುತ್ತದೆ. ನಿಯತಕಾಲಿಕವಾಗಿ ಕನಿಷ್ಟದಿಂದ ಗರಿಷ್ಠ ವೇತನ ಹೆಚ್ಚಳ ಮಾಡುವುದನ್ನು ಇದು ಸೂಚಿಸುತ್ತದೆ. ಪ್ರಗತಿಪರ ನೇಮಕಾತಿಯ ಸಂದರ್ಭದಲ್ಲಿ ವೇತನ ಬಡ್ತಿಯನ್ನು ಸಿಎಸ್ಆರ್ನ 151 ವಿಧಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ, ಅಂದರೆ ಅದು ಗಳಿಸಿದ ದಿನಾಂಕದ ಮರುದಿನದಿಂದ ವೇತನ ಬಡ್ತಿಯಾಗುತ್ತದೆ. ಒಟ್ಟಾರೆಯಾಗಿ ತೆಗೆದುಕೊಂಡ ಈ ಯೋಜನೆಯು ಕೇಂದ್ರ ಸರಕಾರಿ ಸೇವಕನ/ನೌಕರನ ನೇಮಕವು ಪ್ರಗತಿ ನೇಮಕಾತಿಯಾಗಿದೆ ಮತ್ತು ವೇತನದಲ್ಲಿ ನಿಯತಕಾಲಿಕ ಹೆಚ್ಚಳವು ವೇತನ ರಚನೆಯ ಭಾಗವಾಗಿದೆ ಎಂದು ಸ್ಪಷ್ಟವಾಗಿ ಸೂಚಿಸುತ್ತದೆ. ಸಿ.ಎಸ್.ಆರ್ ನ 151ನೇ ವಿಧಿಯು ವೇತನ ಬಡ್ತಿ ಗಳಿಸಿದ ಮರುದಿನದಿಂದ ವೇತನ

ಬಡ್ತಿಯಾಗುತ್ತದೆ ಎಂದು ಪರಿಗಣಿಸುತ್ತದೆ. ಈ ವೇತನ ಬಡ್ತಿಯು ಸಹಜವಾಗಿಯೇ ಆಗುವುದಿಲ್ಲ, ಬದಲಾಗಿ ಇದು ಕೇಂದ್ರ ಸರಕಾರಿ ನೌಕರರ ಉತ್ತಮ ನಡವಳಿಕೆಯ ಮೇಲೆ ಅವಲಂಭಿತವಾಗಿದೆ. ಆದ್ದರಿಂದ, ಕೇಂದ್ರ ಸರ್ಕಾರಿ ನೌಕರರು ತಮ್ಮ ಉತ್ತಮ ನಡವಳಿಕೆಯ ಆಧಾರದ ಮೇಲೆ ನಿರ್ದಿಷ್ಟ ಅವಧಿಗೆ ಅಂದರೆ ವಾರ್ಷಿಕ ವೇತನ ಬಡ್ತಿಯ ಸಂದರ್ಭದಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಪಡೆಯುತ್ತಾರೆ ಎಂಬುದು ಸ್ಪಷ್ಟವಾಗಿದೆ. ವೇತನದಲ್ಲಿನ ಹೆಚ್ಚಳವು ಪ್ರಗತಿಪರ ನೇಮಕಾತಿಯ ಅವಿಭಾಜ್ಯ ಅಂಗವಾಗಿದೆ ಮತ್ತು ಅದನ್ನು ಗಳಿಸಿದ ಮರುದಿನದಿಂದ ಬರುತ್ತದೆ.

(ಖಂಡಿಕೆ 23)

"ವಾರ್ಷಿಕ ವೇತನ ಹೆಚ್ಚಳವನ್ನು ಹುದ್ದೆಗೆ ಲಗತ್ತಿಸಲಾಗಿದ್ದರೂ ಮತ್ತು ಅದನ್ನು ಗಳಿಸಿದ ದಿನದಂದು ಪಾವತಿಸಬೇಕಾಗುತ್ತದೆ ಆದರೆ ವೇತನ ಹೆಚ್ಚಳ ಆಗುವ ಅಥವಾ ಸಂದಾಯವಾಗಬೇಕಿರುವ ಮರುದಿನ ನಿರ್ಣಾಯಕ ಅಥವಾ ನಿರ್ಧಾರಕವಾಗಿರುವುದಿಲ್ಲ. ಪ್ರಗತಿಪರ ನೇಮಕಾತಿ ಹೆಚ್ಚಳವನ್ನು ನಿಯಂತ್ರಿಸುವ ಶಾಸನಬದ್ಧ ಯೋಜನೆಯಲ್ಲಿ ಸರ್ಕಾರಿ ಸೇವಕರು ಒಂದು ವರ್ಷದಲ್ಲಿ ಸಲ್ಲಿಸಿರುವ ಸೇವೆಗಳಿಗೆ ಅವರ ಉತ್ತಮ ನಡವಳಿಕೆಗೆ ಅನುಗುಣವಾಗಿ ವೇತನ ಬಡ್ತಿ ಪಾವತಿಸಬೇಕಾಗುತ್ತದೆ. ಕೇಂದ್ರ ಸರ್ಕಾರಿ ನೌಕರರ ವೇತನವನ್ನು ಕಾಲಕಾಲಕ್ಕಾದ ಹೆಚ್ಚಳದ ಮೂಲಕ ನಿಗದಿತ ವೇತನದಲ್ಲಿ ಕನಿಷ್ಠ ಮಟ್ಟದಿಂದ ಗರಿಷ್ಠ ಮಟಕ್ಕೆ ಏರಿಸಲಾಗುತ್ತದೆ. ಸರ್ಕಾರಿ ಸೇವಕರು ತಮ್ಮ ಸೇವೆಯ ಅಗತ್ಯವಾದ ಅವಧಿಯನ್ನು ಉತ್ತಮ ನಡತೆಯೊಂದಿಗೆ ಪೂರ್ಣಗೊಳಿಸಿದಾಗ ಮತ್ತು

ನಂತರದ ದಿನದಂದು ಪಾವತಿಸಿದಾಗ ಸಂದಾಯವಾಗಬೇಕಿರುವ ವೇತನದ ಹೆಚ್ಚಳದ ಅರ್ಹತೆ ಸ್ಪಷ್ಟಗೊಳ್ಳುತ್ತದೆ."

(ಖಂಡಿಕೆ 24)

"ಉದ್ದೇಶದ ಪ್ರತ್ಯೇಕತೆಯಲ್ಲಿ, ಇದು ಅರ್ಹತೆಯ ದಿನಾಂಕದ ನಂತರದ ದಿನವನ್ನು ನಿಗದಿಪಡಿಸುತ್ತದೆ ಹಾಗೂ ಯಾವುದೇ ಗ್ರಹಿಸಬಹುದಾದ ವ್ಯತ್ಯಾಸವನ್ನು ಹೊಂದಿಲ್ಲ ಅಥವಾ ಅದರಿಂದ ಯಾವುದೇ ಉದ್ದೇಶವನ್ನು ಸಾಧಿಸಬೇಕಾಗಿಲ್ಲ. ಜೂನ್ 30 ರಂದು ನಿವೃತ್ತರಾಗುತ್ತಿರುವ ಕೇಂದ್ರ ಸರ್ಕಾರಿ ನೌಕರರು ಈಗಾಗಲೇ ಒಂದು ವರ್ಷದ ಸೇವೆಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ಅವರ ಉತ್ತಮ ನಡವಳಿಕೆಯಿಂದ ವೇತನ ಹೆಚ್ಚಳವನ್ನು ಗಳಿಸಿರುತ್ತಾರೆ. ಹೀಗಾಗಿ ಒಂದು ವರ್ಷದವರೆಗೆ ಉತ್ತಮ ನಡವಳಿಕೆಯ ಆಧಾರದ ಮೇಲೆ ಕೇಂದ್ರ ಸರ್ಕಾರಿ ನೌಕರರು ಗಳಿಸಿದ ವೇತನ ಹೆಚ್ಚಳವನ್ನು ವೇತನ ಹೆಚ್ಚಳ ಸಂದಾಯವಾಗಬೇಕಿರುವ ಮುಂದಿನ ದಿನದಂದು ಅವರು ಉದ್ಯೋಗದಲ್ಲಿರಲಿಲ್ಲ ಎಂಬ ಕಾರಣಕ್ಕೆ ಮಾತ್ರ ನಿರಾಕರಿಸಿದರೆ ಅದು ಸಂಪೂರ್ಣ ಅಸಮಂಜಸವಾಗುತ್ತದೆ / ನಿರಂಕುಶವಾಗಿರುತ್ತದೆ."

"ಜೂನ್ 30ರಂದು ನಿವೃತ್ತರಾಗುತ್ತಿರುವ ಸರ್ಕಾರಿ ನೌಕರರ ವಿಚಾರದಲ್ಲಿ, ವೇತನ ಹೆಚ್ಚಳ ಸಂದಾಯವಾಗಬೇಕಿರುವ/ ಪಾವತಿಯಾಗಬೇಕಾದ ಸಂದರ್ಭದಲ್ಲಿ, ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತದೆ ಮತ್ತು ಒಂದು ವರ್ಷದ ತೃಪ್ತಿಕರ ಸೇವೆಗಳಿಂದಾಗಿ ವೇತನ ಹೆಚ್ಚಳವನ್ನು ಪಡೆಯುವ ಸರ್ಕಾರಿ ನೌಕರರ ಹಕ್ಕಿಗೆ ದಾರಿ ಮಾಡಿಕೊಡಬೇಕು, ಇದರಿಂದಾಗಿ ಈ ಯೋಜನೆಯು ಭಾರತದ

ಸಂವಿಧಾನದ 14ನೇ ವಿಧಿಯಲ್ಲಿ ಪ್ರತಿಪಾದಿಸಿರುವ ನ್ಯಾಯಸಮ್ಮತತೆಯ ಸ್ಫೂರ್ತಿಗೆ ಧಕ್ಕೆ ತರದಂತೆ ಅರ್ಥೈಸಲ್ಪಡುತ್ತದೆ. ವೇತನ ಹೆಚ್ಚಳದ ಯೋಜನೆಯನ್ನು ಸಂಪೂರ್ಣವಾಗಿ ಓದಬೇಕು ನಿರ್ದಿಷ್ಟವಾಗಿ ಸಿಎಸ್ಆರ್ ದ ವಿಧಿ 151 ರ ಒಂದು ಭಾಗವನ್ನು ಪ್ರತ್ಯೇಕವಾಗಿ ಓದಲಾಗುವುದಿಲ್ಲ, ಇದರಿಂದಾಗಿ ಇತರ ಭಾಗವು ಕೇಂದ್ರ ಸರ್ಕಾರಿ ಸೇವಕರಿಗೆ ವೇತನ ಬಡ್ತಿಯನ್ನು ಪಡೆಯಲು ಹಕ್ಕು ಸೃಷ್ಟಿಸುತ್ತದೆ ಮತ್ತು ಸರ್ಕಾರಿ ಸೇವಕರು ಗಳಿಸುವ ಹಕ್ಕುಗಳು ಸಂರಕ್ಷಿಸಲ್ಪಡುತ್ತವೆ ಮತ್ತು ಆಕಸ್ಮಿಕವಾದ ಪರಿಸ್ಥಿತಿಯಿಂದಾಗಿ ಅವುಗಳನ್ನು ನಿರಾಕರಿಸಲಾಗುವುದಿಲ್ಲ ಎಂಬುದನ್ನು ಖಾತ್ರಿಪಡಿಸುತ್ತದೆ."

6.6 ಮೇಲೆ ತಿಳಿಸಲಾದ **ನಂದ ವಿಜಯ್ ಸಿಂಘ್** ಪ್ರಕರಣದಲ್ಲಿ ಅದೇ ರೀತಿಯ ವಿಷಯವನ್ನು ನಿರ್ವಹಿಸುವಾಗ ಅಲಹಾಬಾದ್ ಉಚ್ಚನ್ಯಾಯಾಲಯ ಗಮನಿಸಿದೆ ಹಾಗೂ ಕಂಡಿಕೆ 24ರಲ್ಲಿ ಈ ಕೆಳಗಿನಂತೆ ಹೇಳಿದೆ:–

"24. ಸವಲತ್ತನ್ನು ಪಡೆಯುವ ಅರ್ಹತೆ ಕಾನೂನಿನಲ್ಲಿ ಸ್ಪಷ್ಟಗೊಂಡಾಗ, ಸಿಂಧುವಾದ ಕಾರಣವಿಲ್ಲದೆ ಅದನ್ನು ನಿರಾಕರಿಸುವುದು ಏಕಪಕ್ಷೀಯವಾಗಿರುತ್ತದೆ ಎಂದು ಕಾನೂನು ನಿರ್ಧರಿಸುತ್ತದೆ. ಈ ಯೋಜನೆಯಿಂದ ವೇತನ ಹೆಚ್ಚಳದ ಪ್ರಯೋಜನವನ್ನು ನಿರಾಕರಿಸಲು ಏಕೈಕ ಕಾರಣವೆಂದರೆ, ಕೇಂದ್ರ ಸರ್ಕಾರಿ ನೌಕರ ವೇತನ ಬಡ್ತಿ ಸಂದಾಯವಾಗಬೇಕಿರುವ ದಿನದಂದು ಈ ಹುದ್ದೆಯನ್ನು ಹೊಂದಿರಲಿಲ್ಲ. ವೇತನ ಹೆಚ್ಚಳ ಮಾಡಿದ ಮರು ದಿನದಿಂದ ವೇತನ ಹೆಚ್ಚಳವನ್ನು ನಿರಾಕರಿಸಲು ಇದೆ ಸಿಂಧುವಾದ ಕಾರಣವಾಗಲಾರದು, ಇದು ಉತ್ತಮ

ನಡತೆಯೊಂದಿಗೆ ಒಂದು ವರ್ಷದ ಸೇವೆಯನ್ನು ಪೂರ್ಣಗೊಳಿಸುವ ಉದ್ದೇಶವನ್ನು ಮಾತ್ರ ಪೂರೈಸುತ್ತದೆ ಮತ್ತು ಇದಕ್ಕಾಗಿ ಬೇರೆ ಯಾವುದೇ ಉದ್ದೇಶವನ್ನು ಆಯ್ಕೆ ಮಾಡಲಾಗುವುದಿಲ್ಲ. ವೇತನ ಹೆಚ್ಚಳ ಮಾಡುವ ಮರು ದಿನದ ಪರಿಕಲ್ಪನೆಯು ಬೇರೆ ಯಾವುದೇ ಉದ್ದೇಶವನ್ನು ಹೊಂದಿಲ್ಲ. ಉದ್ದೇಶದ ಪ್ರತ್ಯೇಕತೆಯಲ್ಲಿ ಇದು ಅರ್ಹತೆಯ ದಿನಾಂಕದ ನಂತರದ ದಿನವನ್ನು ನಿಗದಿಪಡಿಸುತ್ತದೆ, ಯಾವುದೇ ಅರ್ಥವಾಗುವ ವ್ಯತ್ಯಾಸವನ್ನು ಹೊಂದಿಲ್ಲ ಅಥವಾ ಅದರಿಂದ ಯಾವುದೇ ಉದ್ದೇಶವನ್ನು ಸಾಧಿಸಬೇಕಾಗಿಲ್ಲ. ಜೂನ್ 30ರಂದು ನಿವೃತ್ತರಾಗುತ್ತಿರುವ ಕೇಂದ್ರ ಸರ್ಕಾರಿ ನೌಕರರು ಈಗಾಗಲೇ ಒಂದು ವರ್ಷದ ಸೇವೆಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ಅವರ ನಡವಳಿಕೆ ಉತ್ತಮವಾಗಿದ್ದರೆ ವೇತನ ಹೆಚ್ಚಳವನ್ನು ಗಳಿಸುತ್ತಾರೆ. ಹೀಗಾಗಿ ಒಂದು ವರ್ಷದವರೆಗೆ ಉತ್ತಮ ನಡವಳಿಕೆಯ ಆಧಾರದ ಮೇಲೆ ಕೇಂದ್ರ ಸರ್ಕಾರಿ ನೌಕರರು ಗಳಿಸಿದ ಹೆಚ್ಚಳವನ್ನು ವೇತನ ಹೆಚ್ಚಳ ಸಂದಾಯವಾಗಬೇಕಿರುವ ಮುಂದಿನ ದಿನದಂದು ಅವರು ಉದ್ಯೋಗದಲ್ಲಿರಲಿಲ್ಲ ಎಂಬ ಕಾರಣಕ್ಕೆ ಮಾತ್ರ ನಿರಾಕರಿಸಿದರೆ ಅದು ಸಂಪೂರ್ಣ ನಿರಂಕುಶವಾಗಿರುತ್ತದೆ /ಅಸಮಂಜಸವಾಗಿರುತ್ತದೆ. ಜೂನ್ 30 ರಂದು ನಿವೃತ್ತರಾಗುತ್ತಿರುವ ಸರ್ಕಾರಿ ನೌಕರರ ವಿಚಾರದಲ್ಲಿ ವೇತನ ಹೆಚ್ಚಳ ಸಂದಾಯವಾಗಬೇಕಿರುವ / ಪಾವತಿಯಾಗಬೇಕಾದ ಅನಂತರದ ದಿನದಂದು ಇದು ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತದೆ ಮತ್ತು ಒಂದು ವರ್ಷದ ತೃಪ್ತಿಕರ ಸೇವೆಗಳ ಕಾರಣದಿಂದಾಗಿ ವೇತನ ಹೆಚ್ಚಳವನ್ನು ಪಡೆಯುವ ಸರ್ಕಾರಿ ನೌಕರರ ಹಕ್ಕಿಗೆ ದಾರಿ ಮಾಡಿಕೊಡಬೇಕು, ಇದರಿಂದಾಗಿ ಈ ಯೋಜನೆಯು ಭಾರತದ ಸಂವಿಧಾನದ 14 ನೇ

ವಿಧಿಯಲ್ಲಿ ಪ್ರತಿಪಾದಿಸಿರುವ ನ್ಯಾಯಸಮ್ಮತತೆಯ ಸ್ಫೂರ್ತಿಗೆ ಧಕ್ಕೆ ತರದಂತೆ ಅರ್ಥೈಸಲ್ಪಡುತ್ತದೆ. ವೇತನ ಹೆಚ್ಚಳದ ಯೋಜನೆಯನ್ನು ಸಂಪೂರ್ಣವಾಗಿ ಓದಬೇಕು ನಿರ್ದಿಷ್ಟವಾಗಿ ಸಿಎಸ್ಆರ್ ದ ವಿಧಿ 151 ರ ಒಂದು ಭಾಗವನ್ನು ಪ್ರತ್ಯೇಕವಾಗಿ ಓದಲಾಗುವುದಿಲ್ಲ. ಇದರಿಂದಾಗಿ ಇತರ ಭಾಗವು ಕೇಂದ್ರ ಸರ್ಕಾರಿ ಸೇವಕರಿಗೆ ವೇತನ ಬಡ್ತಿಯನ್ನು ಪಡೆಯಲು ಹಕ್ಕು ಸೃಷ್ಟಿಸುತ್ತದೆ. ಇದು ಪ್ರಗತಿಪರ ನೇಮಕಾತಿಯ ಯೋಜನೆಯು ಹಾಗೇ ಉಳಿಯುತ್ತದೆ ಮತ್ತು ಸರ್ಕಾರಿ ಸೇವಕರು ಗಳಿಸುವ ಹಕ್ಕುಗಳು ಸಂರಕ್ಷಿಸಲ್ಪಡುತ್ತವೆ ಮತ್ತು ಆಕಸ್ಮಿಕವಾದ ಪರಿಸ್ಥಿತಿಯಿಂದಾಗಿ ಅವುಗಳನ್ನು ನಿರಾಕರಿಸಲಾಗುವುದಿಲ್ಲ ಎಂಬುದನ್ನು ಖಾತ್ರಿಪಡಿಸುತ್ತದೆ."

6.7 ಇದೇ ರೀತಿಯ ಅಭಿಪ್ರಾಯವನ್ನು ಗುಜರಾತ್ ಉಚ್ಚ ನ್ಯಾಯಾಲಯ, ಮಧ್ಯಪ್ರದೇಶ ಉಚ್ಚ ನ್ಯಾಯಾಲಯ, ಒರಿಸ್ಸಾ ಉಚ್ಚ ನ್ಯಾಯಾಲಯ ಹಾಗೂ ಮದ್ರಾಸ್ ಉಚ್ಚ ನ್ಯಾಯಾಲಯ ಕೂಡ ವ್ಯಕ್ತಪಡಿಸಿವೆ. ಮೇಲೆ ಉಲ್ಲೇಖಿಸಿರುವಂತೆ, ವಿನಿಯಮಗಳ ವಿನಿಯಮ 40(1) ಅನ್ನು ಮೇಲ್ಮನವಿದಾರರು ಅರ್ಥೈಸಿಕೊಳ್ಳುವುದು ಮತ್ತು / ಅಥವಾ ವ್ಯಾಖ್ಯಾನಿಸುವುದು ನಿರಂಕುಶತ್ವಕ್ಕೆ ಕಾರಣವಾಗುತ್ತದೆ ಮತ್ತು ಸೇವಕನು ಹಿಂದಿನ ವರ್ಷದಲ್ಲಿ ಉತ್ತಮ ನಡವಳಿಕೆ ಹಾಗೂ ದಕ್ಷತೆಯೊಂದಿಗೆ ನಿರ್ದಿಷ್ಟ ಅವಧಿಯಲ್ಲಿ ಸೇವೆ ನೀಡುವ ಮೂಲಕ ಈಗಾಗಲೇ ಗಳಿಸಿದ ವಾರ್ಷಿಕ ವೇತನ ಹೆಚ್ಚಳದ ಪ್ರಯೋಜನವನ್ನು ಸರ್ಕಾರಿ ಸೇವಕರಿಗೆ ನಿರಾಕರಿಸುತ್ತದೆ. ಇದು ಒಬ್ಬ ವ್ಯಕ್ತಿಯನ್ನು ಅವನ ತಪ್ಪಿಲ್ಲದೆ ಶಿಕ್ಷಿಸುವುದಾಗಿದೆ. ಮೇಲೆ ಗಮನಿಸಿರುವಂತೆ, ಕೇವಲ ಶಿಕ್ಷೆಯ ಮೂಲಕ ಅಥವಾ

ಅವನು ತನ್ನ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಿಲ್ಲ ಎಂಬ ಕಾರಣಕ್ಕಾಗಿ ಮಾತ್ರ ವೇತನ ಬಡ್ತಿಗಳನ್ನು ತಡೆಹಿಡಿಯಬಹುದು. ನಿರಂಕುಶತೆ / ಅನಿಯಂತ್ರಿತತೆ ಮತ್ತು / ಅಥವಾ ಅಸಮಂಜಸತೆಗೆ ಕಾರಣವಾಗುವ ಯಾವುದೇ ವ್ಯಾಖ್ಯಾನವನ್ನು ಕಡೆಗಣಿಸತಕ್ಕದ್ದು. ಮೇಲ್ಮನವಿದಾರರ ಪರ ಸೂಚಿಸಲಾದ ವ್ಯಾಖ್ಯಾನವು ಹಾಗೂ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ತೆಗೆದುಕೊಂಡ ಅಭಿಪ್ರಾಯವನ್ನು ಅಂಗೀಕರಿಸಿದರೆ, ಅಂತಹ ಸಂದರ್ಭದಲ್ಲಿ ಸರ್ಕಾರಿ ಸೇವಕನೊಬ್ಬನು ತನ್ನ ಉತ್ತಮ ನಡವಳಿಕೆಗೆ ಅನುಗುಣವಾಗಿ ಒಂದು ವರ್ಷದಲ್ಲಿ ಸಲ್ಲಿಸಿದ ಸೇವೆಗಳಿಗಾಗಿ ಗಳಿಸಿದ ವಾರ್ಷಿಕ ವೇತನ ಬಡ್ತಿಯನ್ನು ನಿರಾಕರಿಸುವುದಕ್ಕೆ ಸಮನಾಗಿರುತ್ತದೆ. ಸರ್ಕಾರಿ ಸೇವಕರು ತಮ್ಮ ಸೇವೆಯ ಅವಧಿಯನ್ನು ಉತ್ತಮ ನಡತೆಯೊಂದಿಗೆ ಪೂರ್ಣಗೊಳಿಸಿದಾಗ ಮತ್ತು ನಂತರದ ದಿನದಂದು ಪಾವತಿಸಬೇಕಾದಾಗ ಸಂದಾಯವಾಗಬೇಕಿರುವ ವೇತನದ ಬಡ್ತಿ ಪಡೆಯುವ ಅರ್ಹತೆಯು ರೂಪುಗೊಳ್ಳುತ್ತದೆ /ಖಚಿತಗೊಳ್ಳುತ್ತದೆ. ಪ್ರಸ್ತುತ ಪ್ರಕರಣದಲ್ಲಿ “accrue” ಎಂಬ ಪದವನ್ನು ಉದಾರವಾಗಿ ಅರ್ಥೈಸಿಕೊಳ್ಳಬೇಕು ಮತ್ತು ‘ಮುಂದಿನ ದಿನದಂದು ಸಂದಾಯವಾಗಬೇಕು ಎಂದು ಅದು ಅರ್ಥೈಸುತ್ತದೆ. ಯಾವುದೇ ವ್ಯತಿರಿಕ್ತ ದೃಷ್ಟಿಕೋನವು ಅನಿಯಂತ್ರಿತ / ನಿರಂಕುಶತೆ ಮತ್ತು ಅತಾರ್ಕಿಕತೆಗೆ ಕಾರಣವಾಗುತ್ತದೆ ಹಾಗೂ ಉತ್ತಮ ನಡವಳಿಕೆ ಮತ್ತು ದಕ್ಷತೆಯೊಂದಿಗೆ ಒಂದು ವರ್ಷದವರೆಗೆ

ಸೇವೆಯನ್ನು ಒದಗಿಸಲು ಅರ್ಹನಾಗಿದ್ದರೂ ಸರ್ಕಾರಿ ಸೇವಕನಿಗೆ ಕಾನೂನುಬದ್ಧ ವಾರ್ಷಿಕ ವೇತನ ಹೆಚ್ಚಳವನ್ನು ನಿರಾಕರಿಸುತ್ತದೆ ಮತ್ತು ಆದುದರಿಂದ, ಅಂತಹ ಅಲ್ಪ ವ್ಯಾಖ್ಯಾನವನ್ನು ತಪ್ಪಿಸಬೇಕು. ಮೇಲೆ ತಿಳಿಸಲಾದ **ಪಿ.ಅಯಂಪೆರುಮಲ್** ಪ್ರಕರಣದಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯ; **ಗೋಪಾಲ್ ಸಿಂಗ್** ಪ್ರಕರಣದಲ್ಲಿ ದೆಹಲಿ ಉಚ್ಚ ನ್ಯಾಯಾಲಯ; **ನಂದ ವಿಜಯ್ ಸಿಂಗ್** ಪ್ರಕರಣದಲ್ಲಿ ಅಲಹಬಾದ್ ಉಚ್ಚ ನ್ಯಾಯಾಲಯ; **ಯೋಗೆಂದ್ರ ಸಿಂಗ್ ಭಡೌರಿಯಾ** ಪ್ರಕರಣದಲ್ಲಿ ಮಧ್ಯಪ್ರದೇಶ ಉಚ್ಚ ನ್ಯಾಯಾಲಯ; **ಎಎಫ್ಆರ್ ಅರುಣ ಕುಮಾರ್ ಬಿಸ್ವಾಲ್** ಪ್ರಕರಣದಲ್ಲಿ ಒರಿಸ್ಸಾ ಉಚ್ಚ ನ್ಯಾಯಾಲಯ; ಹಾಗೂ **ತಾಕತ್ ಸಿನ್ಹ ಉದೆಸಿನ್ಹ ಸೊಂಗಾರ** ಪ್ರಕರಣದಲ್ಲಿ ಗುಜರಾತ್ ಉಚ್ಚ ನ್ಯಾಯಾಲಯ ಗಳು ತೆಗೆದುಕೊಂಡ ಅಭಿಪ್ರಾಯದೊಂದಿಗೆ ನಾವು ಸಂಪೂರ್ಣ ಸಹಮತಿ ಹೊಂದಿದ್ದೇವೆ. ಆದರೆ, ಮೇಲೆ ತಿಳಿಸಲಾದ **ಪ್ರಧಾನ ಮಹಾಲೇಖಪಾಲರು, ಆಂಧ್ರಪ್ರದೇಶ** ಪ್ರಕರಣದಲ್ಲಿ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ತೆಗೆದುಕೊಂಡ ವ್ಯತಿರಿಕ್ತ ಅಭಿಪ್ರಾಯವನ್ನು ಮತ್ತು **ಯೂನಿಯನ್ ಆಫ್ ಇಂಡಿಯಾ ವಿರುದ್ದ ಪವಿತ್ರನ್ (ಒ.ಪಿ (ಸಿಎಟಿ) ಸಂಖ್ಯೆ.111/2020 ರಂದು ತೀರ್ಪಾದ)** ಹಾಗೂ **ಹರಿಪ್ರಕಾಶ್ ವಿರುದ್ದ ಹಿಮಾಚಲ ಪ್ರದೇಶ ಮತ್ತು ಇತರ ಪ್ರಕರಣದಲ್ಲಿ (ಸಿಡಬ್ಲ್ಯು ಪಿ ಸಂಖ್ಯೆ. 2503/2016 ರಂದು ತೀರ್ಪಾದ)** ನಿರ್ಧಾರಗಳನ್ನು ನಾವು ಅನುಮೋದಿಸುವುದಿಲ್ಲ.

7. ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಮೇಲೆ ತಿಳಿಸಿದ ಕಾರಣಗಳಿಗಾಗಿ, ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠವು ಮೂಲ ರಿಟ್ ಅರ್ಜಿದಾರರು ತಮ್ಮ ಸೇವೆಯ ಕೊನೆಯ ದಿನದಂದು ಗಳಿಸಿದ ವಾರ್ಷಿಕ ವೇತನವನ್ನು ಉತ್ತಮ ನಡವಳಿಕೆ ಹಾಗೂ ದಕ್ಷತೆಯೊಂದಿಗೆ ನಿವೃತ್ತಿಯ ದಿನಾಂಕದಿಂದ ಒಂದು ವರ್ಷದ ಮೊದಲು ತಮ್ಮ ಸೇವೆಗಳನ್ನು ಸಲ್ಲಿಸಿದ್ದಕ್ಕಾಗಿ ಮಂಜೂರು ಮಾಡುವಂತೆ ಅರ್ಜಿದಾರರಿಗೆ ನಿರ್ದೇಶಿಸಿದೆ. ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠವು ತೆಗೆದುಕೊಂಡ ಅಭಿಪ್ರಾಯವನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಈ ಸಂದರ್ಭದಲ್ಲಿ ಪ್ರಸ್ತುತ ಮೇಲ್ಮನವಿಯನ್ನು ವಜಾಗೊಳಿಸಬೇಕು ಮತ್ತು ಅದಕ್ಕೆ ಅನುಗುಣವಾಗಿ ಅದನ್ನು ವಜಾಗೊಳಿಸಲಾಗಿದೆ. ಆದಾಗ್ಯೂ, ಮೊಕದ್ದಮೆಯ ಸಂಗತಿಗಳು ಹಾಗೂ ಸನ್ನಿವೇಶಗಳಲ್ಲಿ ವೆಚ್ಚದ ಆದೇಶ ಇರುವುದಿಲ್ಲ.

ಐ.ಎ ಸಂಖ್ಯೆ. 149091/2022 ಅನ್ನು ಮೇಲ್ಕಂಡ ಅಂಶಗಳಿಗೆ ಅನುಗುಣವಾಗಿ ವಿಲೇವಾರಿ ಮಾಡಲಾಗಿದೆ.

.....ನ್ಯಾ.

[ಎಂ.ಆರ್. ಶಾಹ್]

.....ನ್ಯಾ.

[ಸಿ.ಟಿ.ರವಿಕುಮಾರ್]

ನವದೆಹಲಿ

ಫೆಬ್ರವರಿ 17, 2023

ಕ್ಲೇಮು ನಿರಾಕರಣೆ

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಮಗಳನ್ನು ಕಕ್ಷಿದಾರರು ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವುದಕ್ಕಾಗಿ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಮಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."